**ಓ ಎಸ್ ನಂ. 203/2015**
**ಪಿ ಡಬ್ಲ್ಯೂ: 1**

**ದಿ. 29.08.2019 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಸಿ ಬಿ ಆರ್ ವಕೀಲರಿಂದಃ**

ನಾನು ನನ್ನ ವಿಚಾರಣೆಯ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ಪ್ರಮಾಣಪತ್ರದಲ್ಲಿರುವ ಅಂಶವನ್ನು ನಾನೇ ಹೇಳಿ ಬರೆಸಿ ಸಹಿ ಹಾಕಿರುತ್ತೇನೆ. ಅದರಲ್ಲಿನ ಅಂಶಗಳು ಸತ್ಯವಾಗಿರುತ್ತವೆ. ನ್ಯಾಯಾಲಯದ ಮುಂದೆ ಸಲ್ಲಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ.

ದಾವಾ ಸ್ವತ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆ ಹಾಜರು ಪಡಿಸಿರುತ್ತೇನೆ . ಅದನ್ನು ನಿಪಿಃ 1 ಎಂದು ಗುರುತಿಸಲಾಯಿತು . ದಿಃ 25.05.2015 ರ ನೊಟೀಸಿನ ಕಚೇರಿಯ ಪ್ರತಿ ಹಾಜರು ಪಡಿಸಿರುತ್ತೇನೆ . ಅದನ್ನು ನಿಪಿಃ 2 ಎಂದು ಗುರುತಿಸಲಾಯಿತು . ಐದು ಅಂಚೆ ರಶೀದಿಗಳನ್ನು ಹಾಜರು ಪಡಿಸಿರುತ್ತೇನೆ . ಅವುಗಳನ್ನು ನಿಪಿಃ 3 ರಿಂದ 7 ಎಂದು ಗುರುತಿಸಲಾಯಿತು . ಮೂರು ಅಂಚೆ ಸ್ವಿಕೃತಿ ಪತ್ರ ಹಾಜರು ಪಡಿಸಿರುತ್ತೇನೆ . ಅವುಗಳನ್ನು ನಿಪಿಃ 8 ರಿಂದ 10 ಎಂದು ಗುರುತಿಸಲಾಯಿತು . ಎರಡು ಜಾರಿಯಾಗದೇ ಹಿಂದಿರುಗಿದ ಅಂಚೆ ಲಕೋಟೆಯನ್ನು ಹಾಜರು ಪಡಿಸಿರುತ್ತೇನೆ . ಅವುಗಳನ್ನು ನಿಪಿಃ 11 ಮತ್ತು 12 ಎಂದು ಗುರುತಿಸಲಾಯಿತು . ಉಪನೋಂದಣಾಧಿಕಾರಿಗಳು , ಹೊಸದುರ್ಗರವರಿಗೆ ನಾವು ನೀಡಿದ ಅರ್ಜಿಯ ಸ್ವೀಕೃತಿ ಹಾಜರು ಪಡಿಸಿರುತ್ತೇನೆ . ಅದನ್ನು ನಿಪಿಃ 13 ಎಂದು ಗುರುತಿಸಲಾಯಿತು .

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶಕೋರಿದ್ದರಿಂದ ಮುಂದೂಡಲಾಯಿತು.

**(ತೆ.ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ**

**ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ**
**ಹೊಸದುರ್ಗ .**